**<u>ದಿನಾಂಕ 03.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು **ನಿಪಿ 14** ಎಂದು ಗುರುತಿಸಲಾಯಿತು.

2ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.</u>**

ನಾನು ಬ್ರಾವೊ ಗ್ಯಾರೇಜ್ ನಲ್ಲಿ 4-5 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನಗೆ ನೇಮಕಾತಿ ಆದೇಶ ನೀಡಿಲ್ಲ. ಬ್ರಾವೊ ಗ್ಯಾರೇಜ್ ಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಾನು ಐಟಿಐ ಮೆಕ್ಯಾನಿಕಲ್ ತರಬೇತಿ ಪಡೆದಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಮ್ಮ ಗ್ಯಾರೇಜ್ ನಲ್ಲಿ ವಾಹನ ತಂದಾಗ ಮತ್ತು ತೆಗೆದುಕೊಂಡು ಹೋಗುವಾಗ ನಮೂದು ಮಾಡುವ ವಹಿ ನಿರ್ವಹಣೆ ಮಾಡಿಲ್ಲ. ನಮ್ಮ ಗ್ಯಾರೇಜ್ ಗೆ ಕಾರನ್ನು ಬಿಟ್ಟ ಬಗ್ಗೆ ಸ್ವೀಕೃತಿಯನ್ನು ಮಾಲೀಕರಿಗೆ ನೀಡುವುದಿಲ್ಲ.

ಕಾರನ್ನು ರಿಪೇರಿಗೆ ಬಿಟ್ಟಾಗ ಆ ಬಗ್ಗೆ ಮೌಲ್ಯ ಮಾಪನ ಮಾಡಿ ಪಟ್ಟಿ ಮಾಡುತ್ತೇವೆ. ಅದಕ್ಕೆ ಜಾಬ್ ಕಾರ್ಡ್ ಎಂದು ಕರೆಯುತ್ತಾರೆ. ಪ್ರಶ್ನಿತ ಕಾರನ್ನು ಅಕ್ಟೋಬರ್ 2024 ರಲ್ಲಿ ನಮ್ಮ ಗ್ಯಾರೇಜ್ ಗೆ ಬಿಟ್ಟಿದ್ದರು. ಜಾಬ್ ಕಾರ್ಡನ್ನು ವಾಹನದ ಮಾಲೀಕರಿಗೆ ನೀಡಿರುತ್ತೇವೆ. ಮಾಲೀಕರಿಂದ ರಿಪೇರಿ ಮಾಡುವ ಬಗ್ಗೆ ಅನುಮೋದನೆ ಪಡೆಯುತ್ತೇವೆ. ಪ್ರಶ್ನಿತ ಕಾರಿಗೆ ಸಂಬಂಧಿಸಿದಂತೆ ಜಾಬ್

ಕಾರ್ಡನ್ನು ಹಾಜರುಪಡಿಸಿಲ್ಲ. ನಮ್ಮ ಗ್ಯಾರೇಜ್ ನಲ್ಲಿ ಕಾರು ಇದ್ದಾಗ ವಿಮಾ ಕಂಪನಿಯವರು ಕಾರನ್ನು ಪರಿಶೀಲಿಸಿ ಮೌಲ್ಯ ಮಾಪನ ಮಾಡಿರುತ್ತಾರೆ. ಯಾವ ವಿಮಾ ಕಂಪನಿಯವರು ನನಗೆ ಗೊತ್ತಿಲ್ಲ. ಸದರಿ ದಾಖಲಾತಿ ವಾಹನದ ಮಾಲೀಕರ ಬಳಿ ಇರುತ್ತದೆ. ಪ್ರಶ್ನಿತ ಕಾರು 2010-11 ನೇ ಸಾಲಿನ ಕಾರು ಆಗಿರುತ್ತದೆ. ಸದರಿ ಕಾರು ನಮ್ಮ ಗ್ಯಾರೇಜ್ ಗೆ ಬಂದಾಗ ಎಷ್ಟು ಕಿ.ಮೀ ಚಲಿಸಿತ್ತು ಎಂದು ನಮೂದು ಮಾಡಿಲ್ಲ. ಸದರಿ ವಿಚಾರವನ್ನು ಜಾಬ್ ಕಾರ್ಡ್ ನಲ್ಲಿ ನಮೂದಿಸಲಾಗಿರುತ್ತದೆ. ಪ್ರಶ್ನಿತ ಕಾರನ್ನು ನಮ್ಮ ಗ್ಯಾರೇಜ್ ಗೆ ಬಿಟ್ಟಾಗ ಅದು ಸುಮಾರು 10-12 ವರ್ಷದ ಹಳೆಯ ಕಾರು ಆಗಿತ್ತು ಎಂದರೆ ಸರಿ. ಅದು 10-12 ವರ್ಷದ ಹಳೆಯ ಕಾರು ಆಗಿದ್ದ ಕಾರಣ, ಅದರ ಬಿಡಿ ಭಾಗಗಳು ಹಾಳಾಗಿರುತ್ತವೆ ಅಥವಾ ನಶಿಸಿ ಹೋಗಿರುತ್ತವೆ ಎಂದರೆ ಸರಿಯಲ್ಲ.

2011-12ನೇ ಸಾಲಿನ ಕಾರಿಗೂ, 2024ನೇ ಸಾಲಿನ ಕಾರಿಗೂ ಮೌಲ್ಯದಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. 2011-12ನೇ ಸಾಲಿನ ಕಾರಿನ ಬಿಡಿಭಾಗಗಳು ಸಮಯಕ್ಕೆ ಅನುಗುಣವಾಗಿ ಸವೆದು ಹೋಗುವುದರಿಂದ ಅದರ ಮಾರುಕಟ್ಟೆ ಮೌಲ್ಯದಲ್ಲಿ ಕುಸಿತ ಇರುತ್ತದೆ ಎಂದರೆ ಸರಿ. 2024ರಲ್ಲಿ ಪ್ರಶ್ನಿತ ಕಾರಿನ ಸೂಕ್ತ ಮಾರುಕಟ್ಟೆ ಮೌಲ್ಯ ಕೇವಲ 2 ಲಕ್ಷ ಆಗಿತ್ತು ಎಂದರೆ ಸರಿಯಲ್ಲ. ನಾವು ಬದಲಾವಣೆ ಮಾಡಿದ ಬಿಡಿಭಾಗಗಳು 2010ರಿಂದ ಸವೆದು ಹೋದ ಕಾರಣ ಮೌಲ್ಯ ಕಡಿಮೆ ಆಗುತ್ತದೆ ಎಂದರೆ ಸರಿಯಲ್ಲ.

ನಮ್ಮ ಗ್ಯಾರೇಜ್ ಅಧಿಕೃತ ಸರ್ವಿಸ್ ಸೆಂಟರ್ ಆಗಿರುವುದಿಲ್ಲ ಎಂದರೆ ಸರಿ. ನಿಪಿ 10 ರಲ್ಲಿ ನಮ್ಮ ಗ್ಯಾರೇಜ್ ನ ಪೂರ್ಣ ವಿಳಾಸ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ ಮೇಲ್ಭಾಗದ ಬಲಭಾಗದಲ್ಲಿ ಕೆಂಪು ಬಣ್ಣದ ಸ್ಥಳದಲ್ಲಿ ಇರುವ ವಿಳಾಸದಲ್ಲಿ ಪ್ರದೇಶ ಮತ್ತು ಪಿನ್ ಕೋಡ್ ನಮೂದು ಇಲ್ಲ ಎಂದರೆ ಸರಿ. ನಿಪಿ 10ರಲ್ಲಿ ನಮೂದಿಸಿರುವ ಬಿಡಿಭಾಗಗಳನ್ನು ಜೆ.ಸಿ ರಸ್ತೆಯಲ್ಲಿರುವ ಜಾಡೆ ಆಟೋಮೊಬೈಲ್ಸ್ ನಲ್ಲಿ ಖರೀದಿ ಮಾಡಿರುತ್ತೇವೆ. ಆ ಬಗ್ಗೆ ನಮ್ಮ ಗ್ಯಾರೇಜ್

ಹೆಸರಿನಲ್ಲಿ ಬಿಲ್ಲನ್ನು ತಯಾರಿಸಲಾಗಿದ್ದು, ಅದನ್ನು ಹಾಜರುಪಡಿಸಿರುತ್ತೇವೆ. ನಿಪಿ 10ರಲ್ಲಿ ನಮೂದಿಸಿರುವ ಬಿಡಿಭಾಗಗಳ ಮೊತ್ತವನ್ನು ಆಟೋಮೊಬೈಲ್ಸ್ ಗೆ ಯಾವ ರೂಪದಲ್ಲಿ ನೀಡಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ನಿಪಿ 10 ರಲ್ಲಿ ಯಾವ ರೂಪದಲ್ಲಿ ಹಣ ನೀಡಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ 10 ಅನ್ನು ಸೃಷ್ಟಿಸಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಶ್ನಿತ ಕಾರನ್ನು ನಮ್ಮ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಲ್ಲ ಮತ್ತು ನಿಪಿ 10 ರಲ್ಲಿರುವ ಬಿಡಿಭಾಗಗಳು ಪ್ರಶ್ನಿತ ಕಾರಿಗೆ ಸಂಬಂಧಪಟ್ಟದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಬಿಡಿಭಾಗಗಳನ್ನು ಬದಲಾವಣೆ ಮಾಡಿದ ನಂತರ ಹಳೆಯ ಬಿಡಿಭಾಗಗಳನ್ನು ಮಾಲೀಕರು ಕೇಳಿದರೆ ನೀಡುತ್ತೇವೆ. ಹಳೆಯ ಬಿಡಿಭಾಗಗಳಿಗೂ ಸಹ ಮೌಲ್ಯ ಇರುತ್ತದೆ ಎಂದರೆ ಸರಿಯಲ್ಲ. ಬ್ರಾವೊ ಕಾರ್ ಕೇರ್ ಗ್ಯಾರೇಜ್ ನಲ್ಲಿ ನಾನು ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**